ಇದರ feasibility ಯನ್ನು study ಮಾಡಿಸಬೇಕು. ಈ ಬಗ್ಗೆ ದಯವಿಟ್ಟು ತಮ್ಮ ಅಧಿಕಾರಿಗಳಿಗೆ ಆದೇಶ ಕೊಡಿ, ನಮ್ಮನ್ನೂ consult ಮಾಡಲು ಹೇಳಿ. ಅವರು ಬಂದು spot inspection ಮಾಡಿದರೆ feasiblity ಗೊತ್ತಾಗುತ್ತದೆ. ತಾವು busy ಆಗಿರುತ್ತೀರಿ. ಆದ್ದರಿಂದ ತಾವು ದಯವಿಟ್ಟು ಅಧಿಕಾರಿಗಳಿಗೆ ಹೇಳಬೇಕು. ನಾವೂ ಅವರೊಂದಿಗೆ ಚರ್ಚೆ ಮಾಡುತ್ತೇವೆ. ನಮ್ಮ ಸಲಹೆ feasible ಆಗಿದ್ದರೆ ಅವರು ತೆಗೆದುಕೊಳ್ಳಲಿ. ಆ ರೀತಿ ಕೆಲಸ ಮಾಡಿ ಎಂದು ಆದೇಶ ಕೋಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಈಗಾಗಲೇ ಉತ್ತರ ಹೇಳಿದ್ದೇನೆ. Traffic ಸ್ಥಿತಿಯನ್ನು ನೋಡಿಕೊಂಡು ಹಂತಹಂತವಾಗಿ ಮಾಡೋಣ ಎಂದು ಹೇಳಿದ್ದೇನೆ. ಮೊದಲು ಈಗ ತೀರ್ಮಾನಿಸಿರುವ 40 ಕಿ.ಮೀ. ಅನ್ನು ಪೂರ್ಣ ಮಾಡುವುದಕ್ಕೆ ಏನೇನು ಮಾಡಬೇಕೋ ಅದಕ್ಕೆ ಎಲ್ಲ ರೀತಿಯ ಪ್ರಯತ್ನ ಮಾಡೋಣ ಮೊದಲು 4 ಕಿ.ಮೀ. ಅನ್ನು ಪೂರ್ಣ ಮಾಡುವುದಕ್ಕೆ ಏನೇನು ಬೇಕೋ ಎಲ್ಲಾ ಪ್ರಯತ್ನ ಮಾಡೋಣ. ನಂತರ ಇದನ್ನು ಸಹ ಪರಿಗಣನೆ ಮಾಡುತ್ತೇನೆ. ಕೇವಲ ಈ ಭಾಗ ಮಾತ್ರವಲ್ಲ, ಬೆಂಗಳೂರಿನ ಬಹುತೇಕ ಎಲ್ಲಾ ಭಾಗದಲ್ಲಿ ಮೆಟ್ರೋ ಅಥವಾ ಮೋನೋ ರೈಲು ಓಡಾಡಬೇಕೆನ್ನುವುದು ನನ್ನ ಅಪೇಕ್ಷೆಯಾಗಿದೆ. ನಿಮ್ಮಂಥ ಸಲಹೆ ಸೂಚನೆಗಳನ್ನು ನೀಡುವವರು ಅನೇಕರು ಇದ್ದಾರೆ. ನಾನು ಇದನ್ನು ಆಗುವುದಿಲ್ಲವೆಂದು ಹೇಳುತ್ತಿಲ್ಲ. ಆಗುವುದಿಲ್ಲವೆಂದು ಎಂದು ಖಂಡಿತಾ ಹೇಳುತ್ತಿಲ್ಲ. ನಾನು ಇದನ್ನು ಪರಿಶೀಲನೆ ಮಾಡಿ, ಅಗತ್ಯವಿದ್ದರೆ ನಿಮ್ಮನ್ನೂ ಕರೆಸಿಕೊಳ್ಳುತ್ತೇನೆ. ಆ ಪಕ್ಷ ಈ ಪಕ್ಷ ಸದಸ್ಯರೆನ್ನುವ ಭೇದಭಾವ ನನಗಿಲ್ಲ. ಇಡೀ ಬೆಂಗಳೂರು ಮಹಾನಗರ ಇಡೀ ವಿಶ್ವದ ಗಮನ ಸೆಳೆಯುತ್ತಿದೆ. ಮೊನ್ನೆ ತಾನೆ Global investors meet ಆಗಿದೆ. ಇವತ್ತು ಸಹ ಸುಮಾರು 500 ಕೋಟಿ ರೂಪಾಯಿಗಳಷ್ಟು ivest ಮಾಡುವಂಥ ದೊಡ್ಡ ಕಂಪನಿಯವರು ಬಂದು ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿ ಹೋದರು. ಅದ್ದರಿಂದ ಬೆಂಗಳೂರಿಗೆ ಅಗತ್ಯವಿರುವ ಎಲ್ಲಾ ಸವಲತ್ತು ಒದಗಿಸಬೇಕು Metro, Mono, High Speed Rail ಇವೆಲ್ಲವುಗಳ ಅಗತ್ಯತೆ ಇದೆ. ನಾನು ಆ ಬಗ್ಗೆ ಗಮನ ಕೊಡುತ್ತೇನೆ. ನಾನು ನಿಮ್ಮ ಜೊತೆ ಮಾತನಾಡುತ್ತೇನೆ.

### ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ

**74 (125) ಶ್ರೀ ಎಸ್.ಆರ್. ಮಹೇಶ್ (ಕೃಷ್ಣರಾಜನಗರ) :–** ಮಾನ್ಯ ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ನಗರವು ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳು ತಮ್ಮ

ಬಡಾವಣೆಯ ಒಳಚರಂಡಿ ಕಾಮಗಾರಿಗಾಗಿ ಕರ್ನಾಟಕ ಒಳಚರಂಡಿ ಮತ್ತು ನೀರು ಸರಬರಾಜು ವಂಡಳಿಯಿಂದ ಅನುಮತಿ ಪಡೆಯುವುದು ಅವಶ್ಯಕತೆ ಇದೆಯೇ ?

ಆ) ಹಾಗಿದಲ್ಲಿ, ಕಳೆದ ಎರಡು ವರ್ಷಗಳಿಂದ ಒಳಚರಂಡಿ ಕಾಮಗಾರಿಯ ಅನುಮತಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು? (ಖಾಸಗಿ ಬಡಾವಣೆವಾರು ಮಾಹಿತಿ ನೀಡುವುದು)

ಇ) ಅನುಮತಿ ನೀಡಿರುವ ಬಡಾವಣೆಗಳ ಸಂಖ್ಯೆ ಎಷ್ಟು ? ಹಾಗೂ ಅನುಮತಿ ನೀಡದಿರುವ ಬಡಾವಣೆಗಳ ಸಂಖ್ಯೆ ಎಷ್ಟು? (ಮಾಹಿತಿ ನೀಡುವುದು);

ಈ) ಅನುಮತಿ ನೀಡದಿರಲು ಕಾರಣಗಳೇನು?

**ಶ್ರೀ ಎಸ್. ಸುರೇಶ್ ಕುಮಾರ್** (ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :–

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ 1973ರ ಕಲಂ 28ರ ಪ್ರಕಾರ ಯಾವುದೇ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸ್ಥಳೀಯ ಸಂಸ್ಥೆಗಳು/ ಪ್ರಾಧಿಕಾರಗಳು ಮಂಡಳಿಯ ಅನುಮೋದನೆ ಪಡೆಯುವುದು ಅವಶ್ಯಕವಾಗಿರುತ್ತದೆ.

ಆ) ಕಳೆದ 2 ವರ್ಷಗಳಲ್ಲಿ 85 ಖಾಸಗೀ ಬಡಾವಣೆಗಳು ಅನುಮೋದನೆಗಾಗಿ ಅರ್ಜಿ ಸಲ್ಲಿಸಿದ್ದು, ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ಕಳೆದ 2 ವರ್ಷಗಳಲ್ಲಿ ಸ್ವೀಕರಿಸಿದ ಅರ್ಜಿಗಳ ಪೈಕಿ 40 ಬಡಾವಣೆಗಳಿಗೆ ಅನುಮೋದನೆ ನೀಡಿದ್ದು, ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.

ಈ) ಸದರಿ ಬಡಾವಣೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ರೂಪ ರೇಷೆಗಳಲ್ಲಿ ಬದಲಾವಣೆಗಳಾಗಿದ್ದು, ಅದನ್ನು ಸಮಗ್ರವಾಗಿ ಪರಿಶೀಲಿಸಬೇಕಾಗಿರುತ್ತದೆ. ಆದ್ದರಿಂದ ಅನುಮತಿ ನೀಡಿರುವುದಿಲ್ಲ.

**ಶ್ರೀ ಸಾ.ರಾ. ಮಹೇಶ್ :** ಮಾನ್ಯ ಅಧ್ಯಕ್ಷರೆ, ಕಳೆದ 2 ವರ್ಷಗಳಲ್ಲಿ 85 ಖಾಸಗಿ ಬಡಾವಣೆಗಳಲ್ಲಿ 40 ಬಡಾವಣೆಗಳಿಗೆ ಅನುಮತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ, ಅದು ಮೈಸೂರಿಗೆ ಕೊಟ್ಟ ಅನುಮತಿಯಾಗಿದೆ. ಬೆಂಗಳೂರಿನಲ್ಲಿ ನಿಮ್ಮ ಅಧ್ಯಕ್ಷರಿಗೇನು ಕಡತಗಳು ಬಂದಿದ್ದವು ಅದರಲ್ಲಿ ಯಾವುದನ್ನೂ ಕೊಟ್ಟಿಲ್ಲ. ಹಾಗಾಗಿ, ಇಲ್ಲಿ ರೂಪುರೇಷೆ ಆಗಬೇಕೆಂದು ಹೇಳಿದ್ದಾರೆ. ಸುಮಾರು 2 ವರ್ಷಗಳಷ್ಟು ಕಾಲ ಕೇವಲ ರೂಪರೇಷೆಗೆ ತೆಗೆದುಕೊಂಡರೆ, ಅದನ್ನು ಕಾರ್ಯಗತ ಮಾಡುವುದು ಯಾವಾಗ? ಈ ಬಗ್ಗೆ ತಾವು ಗಮನಿಸಬೇಕು. ಮಾನ್ಯ ಅಧ್ಯಕ್ಷರಿಗೆ ನಿಮ್ಮ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡಲಿಕ್ಕೆ ಸೂಚನೆ ಕೊಟ್ಟರೆ ಈ ಕೆಲಸ ಬೇಗ ಆಗುತ್ತದೆ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್. ಸುರೇಶ್ ಕುಮಾರ್** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮೈಸೂರು ನಗರದ ಕೆಲವು ಬಡಾವಣೆಗಳಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಯಿಂದ ಅನುಮತಿ ಬಂದಿಲ್ಲ ಎಂದು ಪ್ರಶ್ನೆ ಕೇಳಿದ್ದಾರೆ. ಈಗಾಗಲೇ 85 ಖಾಸಗಿ ಬಡಾವಣೆಗಳು ಅನುಮೋದನೆಗಾಗಿ ಅರ್ಜಿ ಸಲ್ಲಿಸಿದ್ದು ಕಳೆದ 2 ವರ್ಷಗಳಲ್ಲಿ ಸುಮಾರು 40 ಬಡಾವಣೆಗಳಿಗೆ ಅನುಮೋದನೆ ನೀಡಿದ್ದು ಇನ್ನೂ 45 ಬಡಾವಣೆಗಳಿಗೆ ಅನುಮೋದನೆ ನೀಡಬೇಕಾಗಿದೆ. ಅದರಲ್ಲಿ ಕೆಲವು ಸಮಸ್ಯೆಗಳಿರುವುದರಿಂದ ಆ ರೂಪರೇಷೆ ಬಂದಿರುವುದರಿಂದ ನಾನೇ ಖುದ್ದಾಗಿ ಪರಿಶೀಲಿಸಿ ಆ 40 ಬಡಾವಣೆಗಳಿಗೆ ಅನುಮೋದನೆ ಕೊಡಲಿಕ್ಕೆ ಕ್ರಮ ತೆಗೆದುಕೊಳುತ್ತೇನೆ.

## ಸಸಿಗಳ ನಿರ್ವಹಣೆಯ ಬಗ್ಗೆ

**92 (418) ಶ್ರೀ ಬಂಡೆಪ್ಪ ಕಾಶಂಪೂರ್ (ಬೀದರ್ ದಕ್ಷಿಣ)** :– ಮಾನ್ಯ ಮುಖ್ಯ ಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಸಸಿಗಳನ್ನು ನೆಡಸಲಾಗಿದೆ:

ಆ) ಯಾವ ಯಾವ ಜಾತಿಯ ಮತ್ತು ಎಲ್ಲೆಲ್ಲಿ ನೆಡಿಸಲಾಗಿದೆ. (ಜಿಲ್ಲಾ ಮತ್ತು ತಾಲ್ಲೂಕು ವಾರು ವಿವರಗಳನ್ನು ನೀಡುವುದು)

ಇ) ಈ ಸಸಿಗಳನ್ನು ನೆಡಲು ಸರ್ಕಾರಕ್ಕೆ ತಗಲಿದ ವೆಚ್ಚವೆಷ್ಟು;

ಈ) ಈ ಸಸಿಗಳನ್ನು ಸಮರ್ಪಕ –ವಾಗಿ ನಿರ್ವಹಣೆ ಮಾಡಲಾಗುತ್ತಿದೆಯೇ ;

ಉ) ಹಾಗಿದಲ್ಲಿ ನಿರ್ವಹಣೆಯ ಮೇಲುಸ್ತುವಾರಿಯನ್ನು ಯಾರಿಗೆ ವಹಿಸಲಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯ ಮಂತ್ರಿಗಳು)** :–

ಅ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ನೆಡಸಲಾದ ಸಸಿಗಳ ವಿವರಗಳು ಈ ಕೆಳಗಿನಂತಿವೆ:

| | |
|---|---|
| 2008–09 | 608.817 ಲಕ್ಷ ಸಸಿಗಳು |
| 2009–10 | 636.842 ಲಕ್ಷ ಸಸಿಗಳು |

ಆ) ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಈ) ಹೌದು

ಉ) ಇಲಾಖಾ ಮುಖಾಂತರ ನೆಟ್ಟ ಸಸಿಗಳ ಮೇಲುಸ್ತುವಾರಿಯನ್ನು ಮಡಲಾಗುತ್ತದೆ.